ತಂವಂಕೂರಿನ ಸಿದ್ಧಾರ್ಥ ಶಿಕ್ಷಣ ಸಂಸ್ಥೆ

೧೮೭೯. ಶ್ರೀ ಟಿ. ಬಿ. ಬಾಳಿಕಾಯಿ (ತಿರಹಟ್ಟಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಮಕೂರಿನಲ್ಲಿರುವ ಸಿದ್ಧಾರ್ಥ ಶಿಕ್ಷಣ ಸಂಸ್ಥೆ ಯಾವ ಯಾವ ಹಾಗೂ ಎಷ್ಟು ಕಾಲೇಜುಗಳನ್ನು ನಡೆಸಂತ್ತಿದೆ.

ಆ) ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯು ಇಂಜಿನಿಯರಿಂಗ್ ಕಾಲೇಜು, ನಡೆಸುತ್ತಿದೆಯೆಂ ಹಾಗಿದ್ದಲ್ಲಿ ಅದು ಪ್ರಾರಂಭದಿಂದ ಇಲ್ಲಿಯವರೆಗೆ ಎಷ್ಟು ವಿದ್ಯಾರ್ಥಿಗಳಿಗೆ ಪ್ರವೇಶ ಕೊಟ್ಟಿದೆ ?

ಇ) ಪ್ರವೇಶ ಪಡೆದ ವಿದ್ಯಾರ್ಥಿಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಜನಾಂಗಕ್ಕೆ ಎಷ್ಟು ಪ್ರತಿಶತ ಪ್ರತಿವರ್ಷ ಪ್ರವೇಶ ಕೊಟ್ಟಿದೆ.

ಈ) ಈ ಸಂಸ್ಥೆಯ ವ್ಯವಸ್ಥಾಪಕ ಮಂಡಳಿಯ ಕಾರ್ಯ ಅಧ್ಯಕ್ಷರು ಯಾರು ?

ಶ್ರೀ ಎಂ ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ತುಮಕೂರಿನ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯು ಒಂದು ಇಂಜಿನಿಯರಿಂಗ್ ಕಾಲೇಜು, ಒಂದು ಪದವಿ ಕಾಲೇಜು, ಒಂದು ಬಿ.ಇಡಿ ಕಾಲೇಜು ಹಾಗೂ ಒಂದು ಜ್ಯೂನಿಯರ್ ಕಾಲೇಜು ಒಟ್ಟು ನಾಲ್ಕು ಕಾಲೇಜುಗಳನ್ನು ನಡೆಸುತ್ತಿದೆ.

ಆ) ಈ ಸಂಸ್ಥೆಯು ಇಂಜಿನಿಯರಿಂಗ್ ಕಾಲೇಜು ನಡೆಸಂತ್ತಿದ್ದು ೧೯೭೯–೮೦ ರಿಂದ ೧೯೮೫–೮೬ ರವರೆಗೆ ಒಟ್ಟು ೧೬೯೦ ಅಭ್ಯರ್ಥಿಗಳಿಗೆ ಪ್ರವೇಶ ನೀಡಲಾಗಿದೆ.

ಇ) ಕಳೆದ ಏಳು ವರ್ಷಗಳಲ್ಲಿ ೧೧೫ ಪರಿಶಿಷ್ಟ ಜಾತಿ ೨೦ ಪರಿಶಿಷ್ಟ ಜನಾಂಗದ ಅಭ್ಯರ್ಥಿಗಳಿಗೆ ಪ್ರವೇಶ ನೀಡಲಾಗಿದೆ.

ಈ) ಈ ಸಂಸ್ಥೆಯ ವ್ಯವಸ್ಥಾಪಕ ಮಂಡಳಿಯ ಕಾರ್ಯಾಧ್ಯಕ್ಷರು ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ಅವರು

ಖಾಸಗಿ ವ್ಯವಸ್ಥಾಪಕರಂ ನಡೆಸಂತ್ತಿರುವ ಪ್ರಾಥಶಾಲೆಗಳು ಹಾಗೂ ಮಹಾವಿದ್ಯಾಲಯಂಗಳು

೧೮೮೩. ಶ್ರೀ ಪಿ. ಬಿ. ಓಂಕಾರ ಮೂರ್ತಿ.—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಈಗಾಗಲೇ ರಾಜ್ಯದ್ಯಾದಂತ ಖಾಸಗಿಯಾಗಿ ಪ್ರೌಢಶಾಲೆ ಕಾಲೇಜುಗಳನ್ನು ನಡೆಸು ವವರಿಗೆ ಸರ್ಕಾರದವರು ೫ ವರ್ಷದಿಂದ ೭ ವರ್ಷದವರೆವಿಗೆ ಅನುಮತಿ ಕೊಡದಿರುವುದು ನಿಜವೆ ?

ಆ) ಹಾಗಿದ್ದಲ್ಲಿ ಸದರಿ ಆದೇಶವನ್ನು ಈ ಹಿಂದೆ ಮಂಜೂರಾಗಿರುವವರಿಗೂ ಅನ್ವಯಿಸಿರುವುದ ಸಾರ್ವಜನಿಕರಿಗೆ ತೊಂದರೆಯಾಗುವುದಿಲ್ಲವೆ.

ಇ) ಹಾಗಿದ್ದಲ್ಲಿ ಈಗ ಸರ್ಕಾರ ಆದೇಶ ಮಾಡಿದಂದಿನಿಂದ ಈಚೆಗೆ ೭ ವರ್ಷ ಮಾಡಿ ಹಿಂದೆ ಮಾಡಿದವುಗಳಿಗೆ ಈಗಿನ ನಿಯಮಾವಳಿಯನ್ನು ರದ್ದು ಪಡಿಸಲಾಗುವುದೆ ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಹೌದು.

ಆ) ಮತ್ತು ಇ) ಏಳು ವರ್ಷ ಮಾಡಿ ಆದೇಶ ಹೊರಡಿಸುವ ಪೂರ್ವ ಇದ್ದ ಶಾಲೆಗಳಿಗೆ ಹೇಗೆ ಸ್ಥಾಪಿಸಬೇಕು. ಎನ್ನುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.